# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 797 |
| ಸದಸ್ಯರ ಹೆಸರು | : | ಕೆ.ಅಬ್ದುಲ್ ಜಬ್ಬಾರ್<br>(ವಿಧಾನ ಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | : | 13.07.2023. |
| ಉತ್ತರಿಸುವ ಸಚಿವರು | : | ಗೃಹ ಸಚಿವರು |

| ಕ್ರಸ | ಪ್ರಶ್ನೆ | ಉತ್ತರ |
|---|---|---|
| ಅ | ಕಳೆದ ಮೂರು ವರ್ಷಗಳಿಂದ ರಾಜ್ಯದಲ್ಲಿ ನಡೆದ ಮತೀಯ ಸಂಘರ್ಷ/ಗಲಭೆ ಪ್ರಕರಣಗಳೆಷ್ಟು; (ಸಂಪೂರ್ಣ ಮಾಹಿತಿ ನೀಡುವುದು) | ರಾಜ್ಯದಲ್ಲಿ ಕಳೆದ ಮೂರು ವರ್ಷಗಳಿಂದ ದಾಖಲಾದ ಮತೀಯ ಸಂಘರ್ಷ/ ಗಲಭೆ ಪ್ರಕರಣಗಳ ವರ್ಷವಾರು ಹಾಗೂ ಜಿಲ್ಲಾವಾರು ಮಾಹಿತಿ ಈ ಕೆಳಗಿನಂತಿದೆ. |

| ಕ್ರಸ | ಜಿಲ್ಲೆ | ವರ್ಷ | | | |
|---|---|---|---|---|---|
| | | 2020 | 2021 | 2022 | 2023 |
| 1 | ಹುಬ್ಬಳ್ಳಿ-ಧಾರವಾಡ | 0 | 1 | 1 | 0 |
| 2 | ಮಂಗಳೂರು ನಗರ | 0 | 0 | 2 | 0 |
| 3 | ಕೊಡಗು | 0 | 3 | 3 | 0 |
| 4 | ಶಿವಮೊಗ್ಗ | 12 | 1 | 11 | 0 |
| 5 | ದಾವಣಗೆರೆ | 0 | 2 | 16 | 0 |
| 6 | ಬಾಗಲಕೋಟೆ | 0 | 0 | 0 | 3 |
| 7 | ಧಾರವಾಡ | 0 | 0 | 1 | 0 |
| 8 | ಹಾವೇರಿ | 3 | 3 | 4 | 8 |
| 9 | ಕಲಬುರಗಿ ಜಿಲ್ಲೆ | 0 | 0 | 8 | 0 |
| 10 | ಕೋಲಾರ | 0 | 1 | 3 | 1 |
| 11 | ತುಮಕೂರು | 0 | 7 | 0 | 0 |
| 12 | ಉತ್ತರ ಕನ್ನಡ | 0 | 4 | 7 | 0 |
| 13 | ದಕ್ಷಿಣ ಕನ್ನಡ | 3 | 3 | 7 | 0 |
| | ಗದಗ | 0 | 2 | 3 | 0 |
| | **ಒಟ್ಟು** | **18** | **25** | **63** | **12** |

| ಕ್ರಸ | ಪ್ರಶ್ನೆ | ಉತ್ತರ |
|---|---|---|
| ಆ | ಈ ರೀತಿಯ ಗಲಭೆಗಳಲ್ಲಿ ಮೃತ/ ಹತ್ಯೆಯಾದವರೆಷ್ಟು; ಮೃತರ ಕುಟುಂಬಗಳಿಗೆ ಸರ್ಕಾರದ ವತಿಯಿಂದ ಪರಿಹಾರ ನೀಡಲಾಗಿದೆಯೇ; ಹಾಗಿದ್ದಲ್ಲಿ, ಎಷ್ಟು ಪ್ರಕರಣಗಳಲ್ಲಿ ಪರಿಹಾರ ಒದಗಿಸಲಾಗಿದೆ; ಪರಿಹಾರ ನೀಡದಿರುವ ಪ್ರಕರಣಗಳೆಷ್ಟು; (ಸಂಪೂರ್ಣ ವಿವರ ನೀಡುವುದು) | ಈ ರೀತಿಯ ಗಲಭೆಗಳಲ್ಲಿ 04 ವ್ಯಕ್ತಿಗಳು ಮೃತರಾಗಿರುತ್ತಾರೆ. ಸದರಿ ಗಲಭೆಗಳಲ್ಲಿ ಮೃತರಾದ ಕುಟುಂಬದವರಿಗೆ ರಾಜ್ಯ ಸರ್ಕಾರದಿಂದ ತಲಾ ರೂ.25 ಲಕ್ಷಗಳನ್ನು ನೀಡಲಾಗಿರುತ್ತದೆ. ಜಿಲ್ಲಾವಾರು ವಿವರಗಳನ್ನು **ಅನುಬಂಧ** ದಲ್ಲಿ ನೀಡಲಾಗಿದೆ. |

| ಕ್ರಸ | ಘಟಕ | ಮೃತ/ಹತ್ಯೆ | ಪರಿಹಾರ ನೀಡಲಾದ ಪ್ರಕರಣ ಸಂಖ್ಯೆ |
|---|---|---|---|
| 1 | ಮಂಗಳೂರು ನಗರ | 2 | 2 |
| 2 | ಶಿವಮೊಗ್ಗ | 1 | 1 |
| 3 | ಗದಗ | 1 | 1 |
| | **ಒಟ್ಟು** | **4** | **4** |

| | | |
|---|---|---|
| ಇ | ರಾಜ್ಯದ ಕೆಲವು ಜಿಲ್ಲೆಗಳಲ್ಲಿ ನಿರಂತರವಾಗಿ ಮತೀಯ ಸಂಘರ್ಷ/ ಗಲಭೆಗಳ ನಡೆಯುತ್ತಿದ್ದರೂ ಸಹ ಇದನ್ನು ತಡೆಗಟ್ಟುವ ನಿಟ್ಟಿನಲ್ಲಿ ಸರ್ಕಾರದ ವೈಫಲ್ಯಗಳು ಕಂಡು ಬರುತ್ತಿರುವ ಕುರಿತು ಸಾರ್ವಜನಿಕ ದೂರು ಸರ್ಕಾರದ ಗಮನಕ್ಕೆ ಬಂದಿದೆಯೇ; | ಮತೀಯ ಸಂಘರ್ಷ/ಗಲಭೆಗಳ ಸಂಬಂಧ ವೈಫಲ್ಯಗಳ ಕುರಿತು ಸಾರ್ವಜನಿಕರಿಂದ ಯಾವುದೇ ದೂರುಗಳು ಬಂದಿರುವುದಿಲ್ಲ. |
| ಈ | ನಿರಂತರವಾಗಿ ನಡೆಯುತ್ತಿರುವ ಮತೀಯ ಸಂಘರ್ಷ/ ಗಲಭೆಗಳನ್ನು ತಡೆಯುವ ನಿಟ್ಟಿನಲ್ಲಿ ಸರ್ಕಾರವು ಕೈಗೊಂಡಿರುವ ಕ್ರಮಗಳೇನು? | ರಾಜ್ಯದಲ್ಲಿ ಮತೀಯ ಗಲಭೆಯನ್ನು ತಡೆಯಲು ಮತ್ತು ಕಾನೂನು ಸುವ್ಯವಸ್ಥೆಯನ್ನು ಕಾಪಾಡಲು ಪೊಲೀಸ್ ಇಲಾಖಾ ವತಿಯಿಂದ ಯಾವಾಗಲೂ ಪ್ರಾಮಾಣಿಕವಾಗಿ ಪ್ರಯತ್ನ ಮಾಡಲಾಗುತ್ತಿದೆ. ಈ ಕುರಿತು ಈ ಕೆಳಗಿನಂತೆ ಮುಂಜಾಗ್ರತಾ ಕ್ರಮ ಕೈಗೊಳ್ಳಲಾಗಿದೆ.<br>➢ ಕೋಮು ಗಲಭೆಗಳು ನಡೆಯದಂತೆ ಕೋಮು ಅತಿ ಸೂಕ್ಷ್ಮ ಪ್ರದೇಶಗಳನ್ನು ಗುರುತಿಸಿ ಅಂತಹ ಪ್ರದೇಶಗಳಲ್ಲಿ ಸೂಕ್ತ ಪೊಲೀಸ್ ಬಂದೋಬಸ್ತ್ ಮಾಡಲಾಗುತ್ತಿರುತ್ತದೆ.<br>➢ ಕೋಮು ಸೌಹರ್ದತೆಗೆ ಧಕ್ಕೆ ತರುವಂತಹ ಬಾಕಿ ಇರುವ ವಿವಾದಗಳನ್ನು ಗುರುತಿಸಿ ಅವುಗಳನ್ನು ಬಗೆಹರಿಸಲು ಜಿಲ್ಲಾಡಳಿತ ವತಿಯಿಂದ ಅಗತ್ಯ ಕ್ರಮ ವಹಿಸಲಾಗುತ್ತಿರುತ್ತದೆ.<br>➢ ಕೋಮು ಅತಿ ಸೂಕ್ಷ್ಮ ಪ್ರದೇಶಗಳಲ್ಲಿ ಅನ್ಯ ಕೋಮಿನ ಜನರು ಯಾವುದಾದರೂ ಮೆರವಣಿಗೆ ಹಾಗೂ ಇನ್ನಿತರೆ ಕಾರ್ಯಕ್ರಮಗಳನ್ನು ನಡೆಸುವ ವೇಳೆ ಕೋಮು ಭಾವನೆಗಳಿಗೆ ಧಕ್ಕೆಯಾಗದಂತೆ ಎಲ್ಲಾ ಮುನ್ನೆಚ್ಚರಿಕಾ ಕ್ರಮಗಳನ್ನು ಕೈಗೊಳ್ಳಲಾಗುತ್ತಿರುತ್ತದೆ.<br>➢ ಠಾಣಾ ವ್ಯಾಪ್ತಿಯಲ್ಲಿ ಶಾಂತಿ ಸಭೆ, ಯುವಜನ ಸಭೆ, ಮೊಹಲ್ಲ ಮೀಟಿಂಗ್, ನಾಗರೀಕ ಸಮಿತಿ ಸಭೆಗಳನ್ನು ನಡೆಸಿ ಸಾರ್ವಜನಿಕರಿಗೆ ಮತ್ತು ಯುವಕರಿಗೆ ತಿಳುವಳಿಕೆಗಳನ್ನು ನೀಡಲಾಗುತ್ತಿದೆ ಹಾಗೂ ವೃತ್ತ ಉಪ ವಿಭಾಗ, ಜಿಲ್ಲಾ ಮಟ್ಟದಲ್ಲಿಯೂ ಸಹ ಸಭೆಗಳನ್ನು ಕೈಗೊಳ್ಳಲಾಗುತ್ತಿದೆ.<br>➢ ಕಾನೂನು ಮತ್ತು ಸುವ್ಯವಸ್ಥೆಗೆ ಭಂಗ ತರುವ ವ್ಯಕ್ತಿಗಳು/ ಸಂಘಟನೆಗಳು/ ಸಾಮಾಜಿಕ ಜಾಲತಾಣಗಳ ಬಗ್ಗೆ ಸತತ ನಿಗಾ ಇಡಲಾಗಿದೆ.<br>➢ ಠಾಣಾ ವ್ಯಾಪ್ತಿಯಲ್ಲಿ ರಾತ್ರಿ ಬೀಟ್ ಮತ್ತು ಶುಭೋದಯ (ಗುಡ್ ಮಾರ್ನಿಂಗ್) ಬೀಟುಗಳನ್ನು ಕೈಗೊಳ್ಳಲಾಗಿದೆ. ಏಕ ಕಾಲದಲ್ಲಿ ಜಿಲ್ಲಾ ವ್ಯಾಪ್ತಿಯಲ್ಲಿ ಕ್ಷಿಪ್ರ ವಾಹನ ತಪಾಸಣೆಗಳನ್ನು ಕೈಗೊಳ್ಳಲಾಗಿದೆ.<br>➢ ಅಂತರ್‌ರಾಜ್ಯ ಸಂಪರ್ಕಿಸುವ ಗಡಿಯಲ್ಲಿ ಚೆಕ್‌ಪೋಸ್ಟ್‌ಗಳನ್ನು ಪ್ರಾರಂಭಿಸಿದ್ದು, ವಾಹನಗಳನ್ನು ಸಂಶಯಿತ ವ್ಯಕ್ತಿಗಳನ್ನು ಹಾಗೂ ಯಾರು ಶಸ್ತ್ರಾಸ್ತ್ರಗಳನ್ನು ಸಾಗಿಸುವರೋ ಅಂತಹ ವ್ಯಕ್ತಿಗಳನ್ನು ತಪಾಸಣೆ ಮಾಡಲಾಗುತ್ತಿದೆ.<br>➢ ಠಾಣಾ ಗುಪ್ತವಾರ್ತಾ ಸಿಬ್ಬಂದಿಯವರಿಗೆ ಮತ್ತು ಬೀಟ್ ಸಿಬ್ಬಂದಿಯವರಿಗೆ ಸೂಕ್ತ ಸಲಹೆ ಸೂಚನೆಗಳನ್ನು ನೀಡುತ್ತಿದ್ದು, ಇವರಿಂದ ಸೂಕ್ತ ಮಾಹಿತಿಯನ್ನು ಸಂಗ್ರಹಿಸಲಾಗುತ್ತಿದೆ.<br>➢ ಸರಹದ್ದಿನಲ್ಲಿ ನಡೆಯುವ ಎಲ್ಲಾ ಬಂದೋಬಸ್ತುಗಳಿಗೆ ಗರಿಷ್ಠ ಮಟ್ಟದ ಅಧಿಕಾರಿ ಮತ್ತು ಸಿಬ್ಬಂದಿಗಳನ್ನು ನಿಯೋಜಿಸಲಾಗುತ್ತಿದೆ.<br>➢ ಸುಧಾರಿತ ಗಸ್ತು ಪದ್ಧತಿಯನ್ನು ಜಾರಿಗೊಳಿಸಿ ಕ್ರಮ ತೆಗೆದುಕೊಳ್ಳಲಾಗಿದೆ.<br>➢ ಹಗಲು ಮತ್ತು ರಾತ್ರಿ ಗ್ರಾಮ ಗಸ್ತು ಕರ್ತವ್ಯಗಳನ್ನು ಪರಿಣಾಮಕಾರಿಯಾಗಿ |

| | | |
|---|---|---|
| | | ನಿರ್ವಹಿಸಲಾಗುತ್ತಿದೆ.<br>➢ ಕೋಮು ಗಲಭೆ ಹಿನ್ನೆಲೆಯುಲ್ಲಿ ವ್ಯಕ್ತಿಗಳ ಚಲನವಲನಗಳನ್ನು ಗಮನಿಸಲಾಗುತ್ತಿದೆ.<br>➢ ರೌಡಿಗಳು ಮತ್ತು ಮತೀಯ ಗೂಂಡಾಗಳ ಮೇಲೆ ಕಠಿಣ ಕ್ರಮಗಳನ್ನು ಕೈಗೊಳ್ಳಲಾಗಿದ್ದು ಅವರ ಚಟುವಟಿಕೆಯ ಮೇಲೆ ಸೂಕ್ತ ನಿಗಾ ಇರಿಸಲಾಗಿದೆ.<br>➢ ಠಾಣಾ ವ್ಯಾಪ್ತಿಯಲ್ಲಿ ಸಕ್ರಿಯವಾಗಿರುವ ರೌಡಿ ಆಸಾಮಿಗಳ ಮತ್ತು ಮತೀಯ ಗೂಂಡಾಗಳ ಚಲನವಲನಗಳನ್ನು ಹಾಗೂ ಅವರ ಚಟುವಟಿಕೆಯ ಕುರಿತು ಮಾಹಿತಿ ಸಂಗ್ರಹಿಸಿ ಅವರ ವಿರುದ್ಧ ಸಿಆರ್‌ಪಿಸಿ ಪ್ರಕಾರ ಪ್ರಕರಣ ದಾಖಲಿಸಿ ಬಾಂಡ್ ಮುಚ್ಚಳಿಕೆ ಪಡೆಯಲಾಗುತ್ತಿದೆ.<br>➢ ದೈಹಿಕ ಹಲ್ಲೆ ನಡೆಸಿದ, ತನಿಖೆ ಅಥವಾ ನ್ಯಾಯಾಲಯದ ವಿಚಾರಣೆಯಲ್ಲಿರುವ ಪ್ರಕರಣಗಳಲ್ಲಿ ಭಾಗಿಯಾದ ರೌಡಿ ಆಸಾಮಿಗಳ ಮತ್ತು ಮತೀಯ ಗೂಂಡಾಗಳು ಪುನ: ದೈಹಿಕ ಹಲ್ಲೆ ಪ್ರಕರಣದಲ್ಲಿ ಭಾಗಿಯಾದರೆ ಸದರಿ ಆರೋಪಿಗಳು ಈಗಾಗಲೇ ನ್ಯಾಯಾಲಯದಿಂದ ಪಡೆದಿರುವ ಜಾಮೀನು ರದ್ದು ಪಡಿಸಲು ಕ್ರಮ ತೆಗೆದುಕೊಳ್ಳಲಾಗುತ್ತಿದೆ.<br>➢ ಕರ್ನಾಟಕ ಪೊಲೀಸ್ ಕಾಯ್ದೆ ಅನ್ವಯ ಗಡಿಪಾರು ಮಾಡಲು ಕ್ರಮವನ್ನು ಕೈಗೊಳ್ಳಲಾಗುತ್ತಿದೆ. |

ಸಂಖ್ಯೆ: ಹೆಚ್‌ಡಿ 75 ಪಿಸಿಇ 2023

(ಜಿ. ಪರಮೇಶ್ವರ)
ಗೃಹ ಸಚಿವರು

# ಅನುಬಂಧ

## ಮಂಗಳೂರು ನಗರ

| ಕ್ರ ಸ | ಪೊಲೀಸ್ ಠಾಣೆ | ಮೊಕದ್ದಮೆ ಸಂಖ್ಯೆ | ಮತೀಯ ಸಂಘರ್ಷ/ಗಲಭೆಗಳಲ್ಲಿ ಮೃತ/ ಹತ್ಯೆಯಾದವರ ಸಂಖ್ಯೆ ಮತ್ತು ವಿವರ | | ಮತೀಯ ಸಂಘರ್ಷ/ಗಲಭೆಗಳಲ್ಲಿ ಮೃತ/ ಹತ್ಯೆಯಾದವರಿಗೆ ಪರಿಹಾರದ ಮಾಹಿತಿ | |
|---|---|---|---|---|---|---|
| | | | ಮೃತರ ವಿವರ | ಹತ್ಯೆಯಾದವರ ವಿವರ | ಪರಿಹಾರ ನೀಡಲಾದ ಪ್ರಕರಣದ ವಿವರ | ಪರಿಹಾರ ನೀಡದೇ ಇರುವ ಪ್ರಕರಣದ ವಿವರ |
| 1 | ಸುರತ್ಕಲ್ | ಮೊ.ನಂ. 62/2022 ಕಲಂ: 143, 147, 148, 504, 326, 302 ಜೊತೆಗೆ 149 ಐ.ಪಿ.ಸಿ | – | ಮೊಹಮ್ಮದ್ ಫಾಜಿಲ್(22) ತಂದೆ: ಉಮ್ಮರ್ ಫಾರೂಕ್ ವಾಸ: ಝಾಪ್ಕೋ ಮಂಜಿಲ್ ಮನೆ ನಂ. 270/1, ಮಂಗಳ ಪೇಟೆ, ಬಾಳಾ ಗ್ರಾಮ, ಮಂಗಳೂರು. | ಮಾನ್ಯ ಮುಖ್ಯಮಂತ್ರಿಯವರ ಜಂಟಿ ಕಾರ್ಯದರ್ಶಿರವರ ಪತ್ರ ಸಂಖ್ಯೆ: CM/JS/04/CMRF/2023 Dt.14-06-2023 ಮತ್ತು ಜಿಲ್ಲಾಧಿಕಾರಿ ಹಾಗೂ ಜಿಲ್ಲಾ ದಂಡಾಧಿಕಾರಿರವರ ಪತ್ರ ಸಂಖ್ಯೆ: ಸಿ.ಎಂಆರ್.ಎಫ್/15/2023/238037 /ಸಿ9 ದಿನಾಂಕ: 16-06-2023 ರಂತೆ ಮಾನ್ಯ ಮುಖ್ಯಮಂತ್ರಿಯವರ ಪರಿಹಾರ ನಿಧಿಯಿಂದ ರೂ 25,00,000/- ಲಕ್ಷ ಪರಿಹಾರ ಮಂಜೂರಾಗಿರುತ್ತದೆ. | – |
| 2 | ಸುರತ್ಕಲ್ | ಮೊ.ನಂ. 109/2022 ಕಲಂ: 448, 302 ಜೊತೆಗೆ 34 ಐ.ಪಿ.ಸಿ | – | ಅಬ್ದುಲ್ ಜಲೀಲ್ @ ಜಲೀಲ್(48) ತಂದೆ: ಅಬ್ದುಲ್ ಖಾದರ್ ವಾಸ: ಮನೆ ನಂ. 9-34, 9ನೇ ಬ್ಲಾಕ್, ಕಾಟಿಪಳ್ಳ, ಮಂಗಳೂರು. | ಮಾನ್ಯ ಮುಖ್ಯಮಂತ್ರಿಯವರ ಜಂಟಿ ಕಾರ್ಯದರ್ಶಿರವರ ಪತ್ರ ಸಂಖ್ಯೆ: CM/JS/04/CMRF/2023 Dt.14-06-2023 ಮತ್ತು ಜಿಲ್ಲಾಧಿಕಾರಿ ಹಾಗೂ ಜಿಲ್ಲಾ ದಂಡಾಧಿಕಾರಿರವರ ಪತ್ರ ಸಂಖ್ಯೆ: ಸಿ.ಎಂಆರ್.ಎಫ್/15/2023/238037 /ಸಿ9 ದಿನಾಂಕ: 16-06-2023 ರಂತೆ ಮಾನ್ಯ ಮುಖ್ಯಮಂತ್ರಿಯವರ ಪರಿಹಾರ ನಿಧಿಯಿಂದ ರೂ 25,00,000/- ಲಕ್ಷ ಪರಿಹಾರ ಮಂಜೂರಾಗಿರುತ್ತದೆ. | |

## ಗದಗ ಜಿಲ್ಲೆ

| ಕ್ರ ಸಂ | ಪೊಲೀಸ್ ಠಾಣೆ | ಮೊಕದ್ದಮೆ ಸಂಖ್ಯೆ | ಮತೀಯ ಸಂಘರ್ಷ/ ಗಲಭೆಗಳಲ್ಲಿ ಮೃತ/ಹತ್ಯೆಯಾದವರ ಸಂಖ್ಯೆ ಮತ್ತು ವಿವರ | | ಮತೀಯ ಸಂಘರ್ಷ/ ಗಲಭೆಗಳಲ್ಲಿ ಮೃತ/ಹತ್ಯೆಯಾದವರಿಗೆ ಪರಿಹಾರದ ಮಾಹಿತಿ | |
|---|---|---|---|---|---|---|
| | | | ಮೃತರ ವಿವರ | ಹತ್ಯೆಯಾದವರ ವಿವರ | ಪರಿಹಾರ ನೀಡಲಾದ ಪ್ರಕರಣದ ವಿವರ | ಪರಿಹಾರ ನೀಡದೇ ಇರುವ ಪ್ರಕರಣದ ವಿವರ |
| 01 | ನರಗುಂದ | 13/2022, ಕಲಂ: 143, 147, 148, 341, 323, 326, 307, 302, 109, 114, 120[ಬಿ], 504 ರೆ/ವಿ 149 ಐಪಿಸಿ. | – | ಸಮೀರ ತಂದೆ ಸುಬಾನಸಾಬ ಶಹಪುರ ವಯಾ-20 ವರ್ಷ ಜಾತಿ-ಮುಸ್ಲಿಂ ಉದ್ಯೋಗ: ಹೊಟೇಲ್ ವ್ಯಾಪಾರ ಸಾ; ನೀರಾವರಿ ಕಾಲೋನಿ, ನರಗುಂದ ತಾ; ನರಗುಂದ, ಜಿಲ್ಲಾ: ಗದಗ | ಸದರಿ ಪ್ರಕರಣದಲ್ಲಿ ಮೃತನ ಕುಟುಂಬಕ್ಕೆ ಮಾನ್ಯ ಜಿಲ್ಲಾಧಿಕಾರಿಗಳು, ಗದಗ ಜಿಲ್ಲೆ, ಗದಗ ರವರ ಆದೇಶ ಪತ್ರ ಸಂಖ್ಯೆ: ಎಮ್ಎಜಿ/ಎಂಆರ್ಎಂ/ಸಿಆರ್-549/2021-22 ದಿನಾಂಕ: 15.06.2023 ರಡಿಯಲ್ಲಿ 25 ಲಕ್ಷ ರೂಪಾಯಿ ಪರಿಹಾರವನ್ನು ಮಂಜೂರು ಮಾಡಿದ್ದು ಇರುತ್ತದೆ. | – |

ಶಿವಮೊಗ್ಗ ಜಿಲ್ಲೆ

| ಕ್ರಸ | ಪೊಲೀಸ್ ಠಾಣೆ | ಮೊಕದ್ದಮೆ ಸಂಖ್ಯೆ | ಮತೀಯ ಸಂಘರ್ಷ/ಗಲಭೆಗಳಲ್ಲಿ ಮೃತ/ಹತ್ಯೆಯಾದವರ ಸಂಖ್ಯೆ ಮತ್ತು ವಿವರ | | ಮತೀಯ ಸಂಘರ್ಷ/ಗಲಭೆಗಳಲ್ಲಿ ಮೃತ/ಹತ್ಯೆಯಾದವರಿಗೆ ಪರಿಹಾರದ ಮಾಹಿತಿ | |
|---|---|---|---|---|---|---|
| | | | ಮೃತರ ವಿವರ | ಹತ್ಯೆಯಾದವರ ವಿವರ | ಪರಿಹಾರ ನೀಡಲಾದ ಪ್ರಕರಣದ ವಿವರ | ಪರಿಹಾರ ನೀಡದೇಇರುವ ಪ್ರಕರಣದ ವಿವರ |
| 1. | ದೊಡ್ಡಪೇಟೆ | ದೊಡ್ಡಪೇಟೆಠಾಣೆಗುನ್ನೆ ನಂ: 77/2022 ಕಲಂ: 302 ಸಹಿತ 34 ಐಪಿಸಿ | – | ಹರ್ಷ @ ಹಿಂದೂ ಹರ್ಷ ಬಿನ್ ನಾಗರಾಜ್ 28 ವರ್ಷ, ಭಾವಸಾರ ಕ್ಷತ್ರೀಯ ಜಾತಿ, , ವಾಸ: ಕುಂಬಾರ ಬೀದಿ, | ರಾಜ್ಯ ಸರ್ಕಾರದಿಂದ 25,00,000/- ರೂ ಪರಿಹಾರವನ್ನು ನೀಡಿರುತ್ತಾರೆ. | – |